ದಿನಾಂಕ: 09-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.
**ಪಾಟೀ ಸವಾಲುಃ ಶ್ರೀ ಎಸ್ ಎನ್ ಎಲ್ ವಕೀಲರಿಂದ 4 ನೇ ಪ್ರತಿವಾದಿಯರ ಪರವಾಗಿ.**

**1.** ನಮ್ಮ ಊರಿಗೂ ಬೇಲೂರಿಗೂ **14** ಕಿ ಮೀ ಆಗುತ್ತದೆ. ನಮ್ಮ ಊರಿಂದ ಬಂಟೇನಹಳ್ಳಿಗೆ **6** ಕಿ.ಮೀ ಆಗುತ್ತದೆ. ಸಾಕ್ಷಿ ಹೇಳಲು ನ್ಯಾಯಾಲಯದಿಂದ ನನಗೆ ಸಮನ್ಸ ಬಂದಿತ್ತು. **5** ನೇ ವಾದಿ ಚಂದ್ರಯ್ಯನೇ ನನಗೆ ಸಾಕ್ಷಿ ಹೇಳಲು ಕರೆದಿದ್ದರು. **5** ನೇ ವಾದಿ ನನ್ನ ಸಂಬಂದಿಕರಾಗಬೇಕು. ದಾವೆಯನ್ನು ಯಾರ ವಿರುದ್ದ ಹಾಕಿರುತ್ತಾರೆ ಎಂದು ಗೊತ್ತಿಲ್ಲ. ದಾವೆಯನ್ನು ಯಾವ ಕಾರಣಕ್ಕಾಗಿ ಹಾಕಿರುತ್ತಾರೆ ಎಂದು ಗೊತ್ತಿಲ್ಲ. ಮುಖ್ಯ ವಿಚಾರಣೆಯಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

**2.** ದಾವಾ ಸ್ವತ್ತಿನ ಸ. ನಂ. ಮತ್ತು ಚೆಕ್ಕುಬಂದಿ ಗೊತ್ತಿಲ್ಲ. ದಾವಾ ಸ್ವತ್ತಿಗೆ ಯಾವ ವರ್ಷ ಯಾವ ತಿಂಗಳು ಅಧಿಕಾರಿಗಳು ಬಂದಿದ್ದರು ಎಂದು ಹೇಳಲು ಆಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಚಾರಗಳು ಗೊತ್ತಿರುವುದಿಲ್ಲ. ವಾದಿಗಳಿಗೆ ಅನುಕೂಲವಾಗುವಂತೆ ನನ್ನ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಾಕ್ಷಿದಾರರ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬೇಲೂರು.

OS

**Senior Civil Judge and JMFC, Belur**